ಹೋಗುತ್ತಾರೆ. 'ಫಾತಿಮಾ' ಎನ್ನುವ ಮುಸಲ್ಮಾನರ ಹುಡುಗಿ ಮತ್ತು ಹಿಂದೂ ಕಥಾನಾಯಕರ ನಡುವೆ ಹಲವಾರು ಮಾತು–ಘಟನೆಗಳು ಬಂದು ಹೋಗುತ್ತವೆ. ಆದರೆ ಅವರಿಬ್ಬರ ಮಧ್ಯೆ ಇದ್ದ ಸಂಬಂಧ ಇಂತಹದೇ ಎನ್ನುವ ಮುದ್ರೆ ಒತ್ತುವ ಹಟ ಕತೆಗಾರನಿಗೆ ಇಲ್ಲ. ಇಬ್ಬರ ವಿಭಿನ್ನ ಧರ್ಮಗಳು ಆ ಸೀಮೆಯಲ್ಲಿ ಮುಖ್ಯ ವಸ್ತುವೇ ಅಲ್ಲ ಎನ್ನುವ ಕತೆಗಾರನ ನಿರ್ಲಕ್ಷ್ಯ ಮತ್ತೊಂದು ರೀತಿಯಲ್ಲಿ 'ಪಾತಿ' ಕತೆಯನ್ನು ಆಪ್ತಗೊಳಿಸುತ್ತದೆ. ಬಹುತೇಕ ಉತ್ತರ ಕರ್ನಾಟಕದ ಕತೆಗಾರರು ಅಲ್ಲಿರುವ ಹಿಂದೂ–ಮುಸಲ್ಮಾನ್ ಜನರ ನಡುವೆ ಸೌಹಾರ್ದದ ಬದುಕನ್ನು ಹೇಳುತ್ತಲೇ ಬಂದಿದ್ದಾರೆ. ಆ ಸಂಗತಿಗೆ ಚಳ್ಳೂರರು ತಮ್ಮ ಸಮ್ಮತಿಯನ್ನು ಈ ಸಂಕಲನದಲ್ಲಿ ಹೇಳುತ್ತಾರೆ.

ಹಾಗಂತ ಎಲ್ಲ ಕತೆಗಳ ಹಂದರವೂ ಅಮೂರ್ತವೇನೂ ಅಲ್ಲ. ಸಂಕಲನಕ್ಕೆ ಹೆಸರು ಕೊಟ್ಟ 'ಫೂ...' ಕತೆ ತನ್ನ ಆದಿ, ಅಂತ್ಯ ಮತ್ತು ಮಧ್ಯವನ್ನು ಸಮರ್ಪಕವಾಗಿ ನಿಭಾಯಿಸುತ್ತದೆ. ಮನೆಯಲ್ಲಿ ಅಣ್ಣ–ಅತ್ತಿಗೆಯ ನಿರ್ಲಕ್ಷ್ಯಕ್ಕೆ ಗುರಿಯಾದ ಅಬಲೆಯೊಬ್ಬಳ ಬದುಕಿನ ದುರಂತವನ್ನು ಪುಟ್ಟ ಹುಡುಗನ ಕಣ್ಣುಗಳ ಮುಖಾಂತರ, ನೀರನ್ನು ಆಗಸಕ್ಕೆ 'ಫೂ...' ಮಾಡಿ ಮಳೆಬಿಲ್ಲು ಮೂಡಿಸುವ ರೂಪಕದೊಂದಿಗೆ ಹೇಳುತ್ತಾರೆ. ಇಂತಹ ಕತೆಯ ಮಾದರಿಗಳು ಕನ್ನಡದಲ್ಲಿ ವಿಪುಲವಾಗಿ ಸಿಕ್ಕುತ್ತವೆ. ತಕ್ಷಣಕ್ಕೆ ಮೊಗಳ್ಳಿ ಗಣೇಶರ 'ಅತ್ತೆ' ಕತೆ ಜ್ಞಾಪಕಕ್ಕೆ ಬರುತ್ತಿದೆ. ಆದರೆ ಮೊಗಳ್ಳಿಯವರು ಹೆಣ್ಣಿನ ಮೇಲಾಗುವ ದೈಹಿಕ ದೌರ್ಜನ್ಯದ ಜೊತೆಗೆ ಕಾಮದ ಕಟು ವಾಸನೆಯನ್ನು ಕತೆಯಲ್ಲಿ ನೇಯ್ದಿದ್ದರು.

'ಮಿಣುಕು ಹುಳು' ಎಂಬ ಕೊನೆಯ ಕತೆಯಲ್ಲಿ ಮಾಂತ್ರಿಕ ವಾಸ್ತವವನ್ನು ಬಳಸಲು ಕತೆಗಾರರು ಪ್ರಯತ್ನಿಸಿದ್ದಾರೆ. ಕೆಲವು ವಿವರಗಳು ಇಷ್ಟವಾಗುತ್ತವಾದರೂ, ತಂತ್ರ ಇಲ್ಲಿ ಸಮರ್ಪಕವಾಗಿ ಫಲಿಸಿಲ್ಲ. ಕತೆ ನನ್ನ ಮನದಾಳಕ್ಕೆ ಇಳಿಯಲು ಸಾಧ್ಯವಾಗಲಿಲ್ಲ. ಕತೆಗಾರ ಈ ತಂತ್ರವನ್ನು ಬಳಸಲು ಇನ್ನಷ್ಟು ಆಯಾಮಗಳನ್ನು, ವಿಸ್ತಾರವನ್ನೂ ಪರಿಗಣಿಸುವುದು ಅವಶ್ಯಕ. ಆದರೆ ಮುಂದಿನ ದಿನಗಳಲ್ಲಿ ಇಂತಹ ತಂತ್ರದ ಸಮರ್ಥ ಕತೆಗಳು ಇವರಿಂದ ಮೂಡಿ ಬರಬಹುದು ಎನ್ನುವ ಸೂಚನೆ ಈ ಕತೆಯಲ್ಲಿದೆ. ಮತ್ತೊಂದು ಕತೆ 'ಕನಸಿನ ವಾಸನೆ'ಯಲ್ಲಿಯೂ ಅಲೌಕಿಕವಾದ ಸಂಗತಿಯೊಂದು ನಮ್ಮ ದೈಹಿಕ ಬಯಕೆಯ ರೂಪಕವಾಗಿ ಬದುಕಲ್ಲಿ ಸುತ್ತಿಕೊಂಡು ಕಾಡುವ ಪರಿಯ ವಿವರಗಳು ಬಂದಿವೆ. ಕಾಮವನ್ನು ಬಚ್ಚಿಟ್ಟು ಬದುಕುತ್ತಿರುವ ವಿಧವೆಯೊಬ್ಬಳ ಹೆಬ್ಬಯಕೆಯ ಕೆರೆಯೊಂದು ಊರಿನ ಪೋಲಿ ಯುವಕನೊಬ್ಬನ ಪಡ್ಡೆತನದಿಂದ ಕೋಡಿ ಹರಿಯುವ ಪರಿಯ ಚಿತ್ರಣ ನೈಜವಾಗಿದೆ. ಆದರೆ ಅದಕ್ಕೆ ಮತ್ತೊಂದು ಧ್ರುವವಾಗಿ ಆ ಪೋಲಿ ಹುಡುಗನ ಬದುಕಿನಲ್ಲಿ ಸಂಭವಿಸುವ ಸಂಗತಿಗಳು ತುಸು ನಾಟಕೀಯವೆನ್ನಿಸುತ್ತವೆ.

ದೇಶೀನುಡಿಗಟ್ಟಿನ ಬಳಕೆ ಲೇಖಕರ ಶಕ್ತಿಯೂ ಆಗಬಹುದು, ಮಿತಿಯೂ ಆಗಬಹುದು. ಕೇವಲ ಅದೊಂದನ್ನೇ ನಂಬಿಕೊಂಡು ಕತೆಗಳನ್ನು ಬರೆಯಲು ಹೋಗಿ ತಮ್ಮ ಮುಂದಿನ ಸಂಕಲನಗಳಲ್ಲಿ ವಸ್ತುವಿನ ಸಾಂದ್ರತೆಯಿಲ್ಲದೆ ಕುಸಿದ ಕತೆಗಾರರನ್ನು ನಾವು ಕಂಡಿದ್ದೇವೆ. ಆ ಕಾರಣದಿಂದಾಗಿ ಚಳ್ಳೂರರ ಮುಂದಿನ ಸಂಕಲನ ನನಗೆ ಬಹಳ ಮುಖ್ಯವೆನ್ನಿಸುತ್ತದೆ. ಅವರಿನ್ನೂ ವಯಸ್ಸಿನಿಂದ ಚಿಕ್ಕವರು. ಗಾಢವಾದ ಹಳ್ಳಿಯ ಬದುಕಿನ ಅನುಭವ ಅವರ ಬೆನ್ನ ಹಿಂದಿದೆ. ಈಗ ವೃತ್ತಿಗಾಗಿ ನಗರ ಸೇರಿರುವುದರಿಂದ, ಬೆಂಗಳೂರಿನ ಅನುಭವಗಳೂ ಅವರಲ್ಲಿ ಹರಳುಗಟ್ಟುತ್ತಿರುತ್ತವೆ. ಅವೆಲ್ಲಾ ಮುಂದೆ ಅದ್ಯಾವ ಕಲಾತ್ಮಕ ರೂಪದಲ್ಲಿ ಹೊರಹೊಮ್ಮುತ್ತವೆಯೋ ಎಂಬ ಕುತೂಹಲ ನನಗಿದೆ.

ನಾಡಿನ ಬೇರೆ ಬೇರೆ ಭಾಗಗಳಿಂದ ಕತೆಗಾರರು ಪುಂಖಾನುಪುಂಖವಾಗಿ ಬರುತ್ತಿದ್ದಾರೆ. ಆದರೆ ಹೈದ್ರಾಬಾದ್ ಕರ್ನಾಟಕದಿಂದ ಬಂದ ಕತೆಗಾರರ ಸಂಖ್ಯೆ ಕಡಿಮೆ. ಈ ಹಿಂದೆ ಅಲ್ಲಿಂದ ಬಂದ ಕತೆಗಾರರು ಕನ್ನಡದ ಬಹುಮುಖ್ಯ ಕತೆಗಾರರಾಗಿ ಬೆಳೆದಿದ್ದಾರೆ. ಆ ಆಶಾಕಿರಣದೊಂದಿಗೆ ಮಂಜುನಾಯಕ ಚಳ್ಳೂರರನ್ನು ಕನ್ನಡ ಕಥಾಜಗತ್ತಿಗೆ ಸ್ವಾಗತಿಸೋಣ.